## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ 391/2021

**ಸಾಕ್ಷಿಯನ್ನು ದಿಃ 23.01.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಹರೀಶ | ಸಿಡಬ್ಲ್ಯೂ 7 | ಪಿಡಬ್ಲ್ಯೂ8 |
| ತಂದೆಯ ಹೆಸರು | ಲೇಟ್ ರಾಚಯ್ಯ | | |
| ವಯಸ್ಸು | 38 ವರ್ಷ | | |
| ಉದ್ಯೋಗ | ನಗರಸಭಾ ಸದಸ್ಯರು | | |
| ವಾಸಸ್ಥಳ | ವಿ ಪಿ ಬೋರೆ, ಹುಣಸೂರು ಪಟ್ಟಣ | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನನಗೆ ಆರೋಪಿತರು ಗೊತ್ತು. ಚಾಸಾ 1 ರಿಂದ 3 ರವರು ಗೊತ್ತಿಲ್ಲ. 2020 ರಲ್ಲಿ ಒಂದು ದಿನ 1 ನೇ ಆರೋಪಿಯ ಮನೆಯ ಹತ್ತಿರ ಜಗಳವಾದ ಬಗ್ಗೆ ನನ್ನನ್ನು ಪಂಚಾಯಿತಿಗೆ ಕರೆಸಿದ್ದರು. ಪಂಚಾಯಿತಿ ನಡೆದಾಗ ಯಾವುದೇ ತೀರ್ಮಾನಕ್ಕೆ ಬರಲಿಲ್ಲ. ಮುಂದಕ್ಕೆ ಕ್ರಮ ತೆಗೆದುಕೊಳ್ಳಿ ಎಂದು ಲಕ್ಷ್ಮೀ ಮಂಜುಳಾರವರಿಗೆ ಹೇಳಿದೆ. ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)

**ಪಾಟೀಸವಾಲು ಸಸಅ ರವರಿಂದಃ–**

ದಿನಾಂಕ 27.12.2020 ರಂದು ಸಂಜೆ 6 ಗಂಟೆಯಲ್ಲಿ ವಿ ಪಿ ಬೋರೆಯಲ್ಲಿ ಚಾಸಾ 1 ಮತ್ತು 2 ರವರ ಮನೆಯ ಹೊಗೆಯು 1 ನೇ ಆರೋಪಿಯ ಮನೆಯ ಕಡೆಗೆ ಹೋಗುತ್ತಿದ್ದ ವಿಚಾರದಲ್ಲಿ ಚಾಸಾ 1 ಮತ್ತು 2 ರವರಿಗೆ ಪಕ್ಕದ ಮನೆಯವರಾದ ಆರೋಪಿತರು ಗಲಾಟೆ ಮಾಡಿರುವ ಬಗ್ಗೆ ಚಾಸಾ 1 ರವರಿಗೆ ಏಟಾಗಿ ಚಿಕಿತ್ಸೆ ಪಡೆಯುತ್ತಿದ್ದ ವಿಚಾರದಲ್ಲಿ ತೀರ್ಮಾನ ಮಾಡಿಕೊಡುವಂತೆ ಚಾಸಾ 2 ಮತ್ತು 1 ನೇ ಆರೋಪಿ ನನಗೆ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಅದರಂತೆ ನಾನು ಎರಡು ಕಡೆಯವರನ್ನು ದಿನಾಂಕ 29.12.2020 ರಂದು ಬೆಳಿಗ್ಗೆ ಸೇರಿಸಿ ಮಾತುಕತೆ ನಡೆಸಿದಾಗ ತೀರ್ಮಾನದಲ್ಲಿ ಸಮಸ್ಯೆ ಬಗೆಹರಿಯಲಿಲ್ಲ ಎಂದರೆ ಸರಿ. ನಾನು ಚಾಸಾ 1 ರವರ ಬಳಿ ಪೊಲೀಸ್ ಠಾಣೆಗೆ ಹೋಗಿ ದೂರು ಕೊಡುವಂತೆ ಹೇಳಿದೆ ಎಂದರೆ ಸರಿಯಲ್ಲ. ಅದರಂತೆ ಚಾಸಾ 1 ರವರು ತಡವಾಗಿ ಪೊಲೀಸ್ ಠಾಣೆಗೆ ದೂರು ಕೊಟ್ಟರು ಎಂದರೆ ಗೊತ್ತಿಲ್ಲ. ಈ ಬಗ್ಗೆ ನಾನು ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳದೆ ಹೇಳಿಕೆಯನ್ನು ನಿಪಿ 8 ಎಂದು ಗುರುತಿಸಲಾಯಿತು. ನನಗೆ ಘಟನೆಯ ಬಗ್ಗೆ ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಬೇಕೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀಮತಿ ಎ ಕೆ ವಕೀಲರಿಂದಃ**

ಇಲ್ಲ ಎನ್ನುತ್ತಾರೆ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.